ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03, ದೂರವಾಣಿ ಸಂಖ್ಯೆ:080-23341615, 23562283, 29720300
ಫ್ಯಾಕ್ಸ್: 080-23347670 e-mail: ksqaacbangalore@gmail.com, ksqaacbengaluru@gmail.com

ಸಂಖ್ಯೆ:KSQ1/DTP Quatation/14/2022-23 ದಿನಾಂಕ:17.08.2022

## ದರಪಟ್ಟಿ ಆಹ್ವಾನ

**ವಿಷಯ:** Performance –Audit ಕಾರ್ಯಕ್ಕೆ ಸಂಬಂಧಿಸಿದಂತೆ 4 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ಸಮೀಕ್ಷೆ ಕೈಗೊಳ್ಳುವ ಸಲುವಾಗಿ ಪ್ರಶ್ನೆ ಪತ್ರಿಕೆ ಹಾಗೂ ಕೀ ಉತ್ತರಗಳನ್ನು DTP ಮಾಡಿ ನೀಡಲು ದರಪಟ್ಟಿ ಕರೆಯುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ Performance –Audit ತಂಡದವರಿಗೆ 4 ಮತ್ತು 7ನೇ ತರಗತಿ ವಿದ್ಯಾರ್ಥಿಗಳ, ಕಲಿಕಾ ಸಾಧನೆ ಸಮೀಕ್ಷೆ ಕೈಗೊಳ್ಳುವ ಸಲುವಾಗಿ ಪ್ರಶ್ನೆ ಪತ್ರಿಕೆ ಹಾಗೂ ಕೀ ಉತ್ತರಗಳನ್ನು ಸಿದ್ದಪಡಿಸಿ ನೀಡಬೇಕಾಗಿದೆ. ಈ ಸಂಬಂಧ DTP ಕಾರ್ಯಕ್ಕೆ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ.

| ಕ್ರ.ಸಂ | ಪ್ರಶ್ನೆ ಪತ್ರಿಕೆ ಹಾಗೂ ಕೀ ಉತ್ತರಗಳ ಅಂದಾಜು ಪುಟಗಳು | ಮಾಧ್ಯಮ | ಪ್ರತಿ ಪುಟಕ್ಕೆ ದರ (ಎಲ್ಲಾ ತೆರಿಗೆಗಳು ಸೇರಿದಂತೆ) | ಒಟ್ಟು |
|---|---|---|---|---|
| 1. | 384 | ಕನ್ನಡ | | |
| 2. | 64 | ಇಂಗ್ಲೀಷ್& ಉರ್ದು | | |

**ಷರತ್ತುಗಳು:**

1. ಕನ್ನಡ ,ಇಂಗ್ಲೀಷ್ ಮತ್ತು ಉರ್ದು ಮಾಧ್ಯಮದಲ್ಲಿ ಪ್ರಶ್ನೆ ಪತ್ರಿಕೆ ಹಾಗೂ ಕೀ ಉತ್ತರಗಳ DTP ಕಾರ್ಯ ನಿರ್ವಹಿಸಬೇಕಿದ್ದು, ಮಾಧ್ಯಮವಾರು ಪ್ರತಿ ಪುಟಕ್ಕೆ ದರ ನಮೂದಿಸುವುದು.
2. ನಮೂದಿತ ದರವು ಎಲ್ಲಾ ರೀತಿಯ ತೆರಿಗೆಗಳು (ಜಿ.ಎಸ್.ಟಿ. ಇನ್ನಿತರೆ ತೆರಿಗೆ) ಸೇರಿದಂತೆ ನೀಡುವುದು.
3. ದರಪಟ್ಟಿ ನೀಡುವ ಸಂಸ್ಥೆಯವರು ಜಿ.ಎಸ್.ಟಿ. ದಾಖಲಾತಿ ಪ್ರಮಾಣ ಪತ್ರವನ್ನು ದರಪಟ್ಟಿಯೊಂದಿಗೆ ಸಲ್ಲಿಸುವುದು.
4. ಒಂದು ಸಂಸ್ಥೆ ಒಂದೇ ದರಪಟ್ಟಿಯನ್ನು ಸಲ್ಲಿಸುವುದು.
5. ಅತ್ಯಂತ ಕಡಿಮೆ ದರ ನಮೂದಿಸಿದ ಸಂಸ್ಥೆಗೆ **L1** ಎಂದು ಪರಿಗಣಿಸಿ ಕಾರ್ಯಾದೇಶ ನೀಡಲಾಗುವುದು.
6. ಮುಚ್ಚಿದ ಸೀಲ್ ಮಾಡಿದ ಕವರ್ ಮೇಲೆ **"ಪ್ರಶ್ನೆ ಪತ್ರಿಕೆ ಹಾಗೂ ಕೀ ಉತ್ತರಗಳ DTP ಕಾರ್ಯಕ್ಕೆ ದರಪಟ್ಟಿ"** ಎಂಬುದಾಗಿ ನಮೂದಿಸುವುದು.
7. **DTP ಕಾರ್ಯ ಅಂತಿಮಗೊಂಡ ನಂತರ SOFT/HARD ಪ್ರತಿ ನೀಡುವುದು.**
8. ಕಾರ್ಯ ಪೂರ್ಣಗೊಂಡ ನಂತರ ಬಿಲ್ಲನ್ನು ನೀಡಿದ ಮೇಲೆ ನಿಯಮಾನುಸಾರ ಪರಿಶೀಲಿಸಿ ಪಾವತಿಗೆ ಕ್ರಮವಹಿಸಲಾಗುವುದು.
9. ದಿನಾಂಕ: **26/08/2022 ರ ಸಂಜೆ 5.30 ರೊಳಗೆ** ಈ ಕಛೇರಿಗೆ ದರಪಟ್ಟಿ ಸಲ್ಲಿಸತಕ್ಕದ್ದು.
**ಹೆಚ್ಚಿನ ಮಾಹಿತಿಗಾಗಿ ಕೆ.ಎಸ್.ಕ್ಯೂ.ಎ.ಎ.ಸಿ ಕಛೇರಿಯನ್ನು ಸಂಪರ್ಕಿಸುವುದು.**

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯೂ.ಎ.ಎ.ಸಿ

C:\Users\acer\Desktop\KSQ-1\2021-22 Audit Quotation.docx